ದಿನಾಂಕ 06-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯರ ಪರವಾಗಿ ಶ್ರೀ ಡಿಬಿಎಸ್ ವಕೀಲರವರಿಂದಃ**

1 ನೇ ವಾದಿಯವರು ನಿಮಗೆ ಏನು ಆಗಬೇಕು ಎಂದರೆ ನನ್ನ ಅಣ್ಣನವರಾದ ಆಸ್ಟ್ರೀನ್ ಮೆಂಡೋನ್ಸ ರವರ ಹೆಂಡತಿ. 2 ಮತ್ತು 3 ನೇ ವಾದಿಯರು ನಿಮಗೆ ಏನು ಆಗಬೇಕು ಎಂದರೆ 1 ನೇ ವಾದಿಯವರ ಮಕ್ಕಳು. ನಿಮ್ಮ ಇನ್ನೊಬ್ಬ ಸಹೋದರನ ಹೆಸರು ಏನು ಎಂದರೆ ಅಲೆನ್ ಮೆಂಡೋನ್ಸ. ಅಲೆನ್ಸ್ ಮೆಂಡೋನ್ಸ ರವರಿಗೆ ವಿವಾಹ ವಿಚ್ಛೇಧನ ಆಗಿದೆಯೇ ಎಂದರೆ ಹೌದು. ದಾವಾ ಆಸ್ತಿಯನ್ನು ನಿಮ್ಮ ತಂದೆ ಮತ್ತು ತಾಯಿಯವರು ಜಂಟಿಯಾಗಿ ಖರೀದಿ ಮಾಡಿರುವುದು ಎಂದರೆ ಹೌದು. ನಿಮ್ಮ ತಂದೆ ಮತ್ತು ತಾಯಿಯವರು ತೀರಿಕೊಂಡ ನಂತರ ದಾವಾ ಆಸ್ತಿಯು ಅವರ ಮಕ್ಕಳಿಗೆ ಬಂದಿರುತ್ತದೆ ಎಂದರೆ ನನ್ನ ತಂದೆಯವರು ತೀರಿಕೊಂಡ ನಂತರ ನನ್ನ ತಾಯಿಯವರಿಗೆ ಬಂದಿದ್ದು, ಅವರು ತೀರಿಕೊಂಡ ನಂತರ ಅವರ 3 ಜನ ಮಕ್ಕಳಿಗೆ ಬಂದಿರುತ್ತದೆ. ಮೇಲೆ ಹೇಳಿದ ಇಬ್ಬರು ಸಹೋದರರು ತೀಕೊಂಡಿದ್ದಾರೆ ಅಲ್ಲವೇ ಎಂದರೆ ಹೌದು. ನಿಮಗೆ ಮತ್ತು ವಾದಿಯರಿಗೆ ಸಮಾನವಾದ ಹಕ್ಕು ದಾವಾ ಆಸ್ತಿಯಲ್ಲಿ ಇದೆ ಎಂದರೆ ವಾದಿಯರಿಗೆ ಸಮಾನವಾದ ಹಕ್ಕು ಇರುವುದಿಲ್ಲ, ಒಂದು ಪಾಲು ಮಾತ್ರ ಇರುತ್ತದೆ. ವಾರಸು ನಾತೆಯಲ್ಲಿರುವುದು ನೀವು ಮತ್ತು 1 ನೇ ವಾದಿಯವರ ಗಂಡ ಎಂದರೆ ಹೌದು. ದಾವಾ ಆಸ್ತಿಯ ಇ-ಖಾತೆಯನ್ನು ಮಾಡಲು ಪುರಸಭೆಗೆ ಯಾರು ಅರ್ಜಿಯನ್ನು ಸಲ್ಲಿಸಿದರು ಎಂದರೆ ನಾನೇ ಸಲ್ಲಿಸಿರುತ್ತೇನೆ. ನೀವು ಇ-ಖಾತೆಯನ್ನು ಮಾಡಲು ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಅರ್ಜಿಯ ಜೊತೆಯಲ್ಲಿ ನಿಮ್ಮ ಆಧಾರ್ ಕಾರ್ಡ್, ವಾದಿಯವರ ಆಧಾರ್ ಕಾರ್ಡ್, ನಿಮ್ಮ ತಂದೆ-ತಾಯಿಯವರು ಜಂಟಿಯಾಗಿ ಖರೀದಿ ಮಾಡಿದ ಕ್ರಯಪತ್ರವನ್ನು ನೀಡಿರುವುದು ಅಲ್ಲವೇ ಎಂದರೆ ಹೌದು. ಆ ಸಮಯದಲ್ಲಿ ನಿಮ್ಮ ಬಳಿ ಇದ್ದ ದಾಖಲೆಗಳು ನೀವು ಅರ್ಜಿಯೊಂದಿಗೆ ಸಲ್ಲಿಸಿದ್ದ ದಾಖಲೆಗಳು ಮಾತ್ರವೇ ಅಲ್ಲವೇ ಎಂದರೆ ಬೇರೆ ದಾಖಲೆಗಳು ಸಹ ಇದ್ದವು. ನೀವು ಈಗ ಹೇಳಿದ ಬೇರೆ ದಾಖಲೆಗಳು ಯಾವುದು ಎಂದೆ ನನ್ನ ಅಣ್ಣನವರು ಬರೆದಿದ್ದ ವಿಲ್ ನಾಮೆ, ಮನೆಗೆ ಸಂಬಂಧಿಸಿದ ಕಾಗದ

ಪತ್ರಗಳು ಇದ್ದವು. ಆ ವಿಲ್ ನಾಮೆಯನ್ನು ನಿಮ್ಮ ಯಾವ ಅಣ್ಣ ಬರೆದಿದ್ದರು ಎಂದರೆ ಅಲೆನ್ಸ್ ಮೆಂಡೋನ್ಸ್ ರವರು ಬರೆದಿದ್ದರು. ಆ ಸಮಯದಲ್ಲಿ ವಿಲ್ ನಾಮೆಯು ಇದ್ದ ಪಕ್ಷದಲ್ಲಿ, ಇ-ಖಾತೆಯನ್ನು ಮಾಡಲು ಅರ್ಜಿಯನ್ನು ಸಲ್ಲಿಸುವಾಗ ವಿಲ್ ನಾಮೆಯನ್ನು ನೀಡದೇ ಇರಲು ಏನಾದರೂ ಕಾರಣ ಇತ್ತೇ ಎಂದರೆ ಇಲ್ಲ. ಸದ್ರಿ ವಿಲ್ ನಾಮೆಯು ನೊಂದಣಿಯಾಗಿತ್ತೇ ಎಂದರೆ ಆಗಿರಲಿಲ್ಲ. ಸದ್ರಿ ವಿಲ್ ನಾಮೆಯು ಎಲ್ಲಿ ಇತ್ತು ಎಂದರೆ ನನ್ನ ಅಣ್ಣನವರು ಇಟ್ಟಿದ್ದ ದಾಖಲೆಗಳಲ್ಲಿ ಇತ್ತು. ಅವುಗಳನ್ನು ಗಾದ್ರೇಜ್ ನಲ್ಲಿ ಬೀಗ ಹಾಕಿ ಇಡಲಾಗಿತ್ತು. ನಿಮ್ಮ ಅಣ್ಣನವರು ತೀರಿಕೊಂಡ ಎಷ್ಟು ದಿನಗಳ ನಂತರ ಗಾದ್ರೇಜ್ ನ ಬೀಗವನ್ನು ನೀವು ತೆರೆದಿರುತ್ತೀರಿ ಎಂದರೆ ನನ್ನ ಅಣ್ಣನವರ ಪೂಜೆಯಾದ ಒಂದು ತಿಂಗಳ ನಂತರ ಗಾದ್ರೇಜ್ ನ ಬೀಗವನ್ನು ತೆರೆದಿರುತ್ತೇನೆ. ನಿಮ್ಮ ಅಣ್ಣನಿಗೆ ಸಂಬಂಧಿಸಿದ ಗಾದ್ರೇಜ್ ನ ಬೀಗವನ್ನು ತೆಗೆಯುವ ಸಮಯದಲ್ಲಿ ವಾದಿಯರಿಗೆ ತಿಳಿಸಿರುತ್ತೀರಾ ಎಂದರೆ ಇಲ್ಲ. ಸಾಕ್ಷಿಯವರು ಮುಂದುವರೆದ ಅವರು ಶವ ಸಂಸ್ಕಾರಕ್ಕೆ ಬಂದಿರಲಿಲ್ಲ ಹಾಗಾಗಿ ಬರುವುದಿಲ್ಲ ಎಂದು ಭಾವಿಸಿದ್ದೆನು. ಗಾದ್ರೇಜ್ ನ ಬೀಗವನ್ನು ತೆಗೆಯುವ ಸಮಯದಲ್ಲಿ ಬೇರೆ ಯಾರು ಇದ್ದರು ಎಂದರೆ ಬೇರೆ ಯಾರು ಇರಲಿಲ್ಲ. ನಿಮ್ಮ ಅಣ್ಣ ಅಲೆನ್ಸ್ ಮೆಂಡೋನ್ಸ ರವರು ತೀರಿಕೊಂಡ ದಿನಾಂಕ ಯಾವುದು ಎಂದರೆ ದಿನಾಂಕ 23.10.2020 ರಂದು ತೀರಿಕೊಂಡಿರುತ್ತಾರೆ. ಅಲೆನ್ಸ್ ಮೆಂಡೋನ್ಸ್ ರವರು ತೀರಿಕೊಂಡ ಕಾಲದಲ್ಲಿ ಕೋವಿಡ್ ಖಾಯಿಲೆ ಇದ್ದು, ಲಾಕ್ ಡೌನ್ ಇದ್ದು, ಬಸ್ ಸಂಚಾರ ಇರಲಿಲ್ಲ ಎಂದರೆ ಹೌದು. ಆ ಸಮಯದಲ್ಲಿ ವಾದಿಯರು ಮುಂಬೈನಲ್ಲಿ ವಾಸವಾಗಿದ್ದರು ಎಂದರೆ ಹೌದು. ಆ ಸಮಯದಲ್ಲಿ ವಾದಿಯರಿಗೆ ಮಾತ್ರವಲ್ಲದೆ ಬೇರೆ ಯಾರಿಗೂ ಸಹ ಮುಂಬೈನಿಂದ ಬರಲು ಆಗುತ್ತಿರಲಿಲ್ಲ, ಸಂಪೂರ್ಣವಾದ ನಿರ್ಬಂಧ ಇತ್ತು ಎಂದರೆ ಬಸ್ ನ ಸಂಚಾರ ಇತ್ತು. ಆ ಸಮಯದಲ್ಲಿ ವಾಹನಗಳ ಸಂಚಾರ ಇತ್ತು ಎಂದು ತೋರಿಸಲು ಯಾರನ್ನಾದರೂ ಸಾಕ್ಷಿಯನ್ನಾಗಿ ವಿಚಾರಣೆ ಮಾಡಬಹುದೇ ಎಂದರೆ ಮಾಡಬಹುದು.

ಅಲೆನ್ಸ್ ಮೆಂಡೋನ್ಸ ರವರು ಯಾವ ಕಾರಣದಿಂದ ಮೃತರಾಗಿದ್ದಾರೆ ಎಂದರೆ ಅವರು ಹೃದಯಾಘಾತದಿಂದ ಮೃತರಾಗಿರುತ್ತಾರೆ. ಅಲೆನ್ಸ್ ಮೆಂಡೋನ್ಸ ರವರ ವೈದ್ಯಕೀಯ

ಖರ್ಚುಗಳನ್ನು ನೀವೇ ಮಾಡಿರುತ್ತೀರಾ ಎಂದರೆ ಹೌದು. ಅಲೆನ್ಸ್ ಮೆಂಡೋನ್ಸ ರವರ ವೈದ್ಯಕೀಯ ಖರ್ಚುಗಳನ್ನು ನೀವು ಭರಿಸಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಬಹುದೇ ಎಂದರೆ ಪಡಿಸಬಹುದು. ಅಲೆನ್ಸ್ ಮೆಂಡೋನ್ಸ ರವರು ತೀರಿಕೊಳ್ಳುವ ಕಾಲಕ್ಕೆ ಅವರ ವಯಸ್ಸು ಎಷ್ಟು ಎಂದರೆ 59 ವರ್ಷ. ಅಲೆನ್ಸ್ ಮೆಂಡೋನ್ಸ ರವರಿಗೆ ಬೇರೆ ಯಾವುದಾದರೂ ಖಾಯಿಲೆ ಇತ್ತೇ ಎಂದರೆ ಇರಲಿಲ್ಲ. ಅಲೆನ್ಸ್ ಮೆಂಡೋನ್ಸ ರವರು ತೀರಿಕೊಳ್ಳುವವರೆಗೆ ದಾವಾ ಆಸ್ತಿಯಲ್ಲಿ ಇದ್ದ ಮನೆಯಲ್ಲಿ ವಾಸ ಮಾಡಿಕೊಂಡು ಇದ್ದರು ಎಂದರೆ ಇರಲಿಲ್ಲ. ಅಲೆನ್ಸ್ ಮೆಂಡೋನ್ಸ ರವರು ಎಲ್ಲಿ ವಾಸವಾಗಿದ್ದರು ಎಂದರೆ ಕಟಪಾಡಿಯಲ್ಲಿರುವ ಅವರ ತಂಗಿಯ ಮನೆಯಲ್ಲಿ ವಾಸವಾಗಿದ್ದರು. ಅಲೆನ್ಸ್ ಮೆಂಡೋನ್ಸ ರವರು ನಿಮ್ಮ ಮನೆಯಲ್ಲಿ ಯಾವ ಸಮಯದಿಂದ ವಾಸವಾಗಿದ್ದರು ಎಂದರೆ ಅವರು ಅನಾರೋಗ್ಯಕ್ಕೆ ತುತ್ತಾದ ದಿನದಿಂದ 2 ತಿಂಗಳ ಕಾಲ ವಾಸವಾಗಿದ್ದರು. ಅದಕ್ಕೆ ಮೊದಲು ಅಲೆನ್ಸ್ ಮೆಂಡೋನ್ಸ ರವರು ಎಲ್ಲಿ ವಾಸವಾಗಿದ್ದರು ಎಂದರೆ ದಾವಾ ಆಸ್ತಿಯಲ್ಲಿರುವ ಮನೆಯಲ್ಲಿಯೇ ವಾಸವಾಗಿದ್ದರು. ಅಲೆನ್ಸ್ ಮೆಂಡೋನ್ಸ ರವರು ನಿಮ್ಮ ಮನೆಗೆ ಅವರಿಗೆ ಆರೋಗ್ಯ ಸರಿ ಇಲ್ಲವೆಂದು ಬಂದಿರುವುದೇ ಎಂದರೆ ಅವರು ನಡೆದಾಡುತ್ತಿದ್ದರು. ಆದರೆ ಸ್ವಲ್ಪ ಸೌಖ್ಯವಿಲ್ಲವೆಂದು ನಮ್ಮ ಮನೆಗೆ ಬಂದಿದ್ದರು. ಅಲೆನ್ಸ್ ಮೆಂಡೋನ್ಸ ರವರು ನಿಮ್ಮ ಮನೆಯಲ್ಲಿ ಇರುವ ಕಾಲದಲ್ಲಿ ಅವರು ಮಲಗಿಕೊಂಡೇ ಇರುವಂತಹ ಖಾಯಿಲೆಗಳಿಂದ ಇರಲಿಲ್ಲವೇ ಎಂದರೆ ಹೌದು. ಅಲೆನ್ಸ್ ಮೆಂಡೋನ್ಸ ರವರನ್ನು ಆಸ್ಪತ್ರೆಗೆ ಯಾರು ದಾಖಲು ಮಾಡಿದರು ಎಂದರೆ ನಾನೇ ದಾಖಲು ಮಾಡಿದೆನು. ಅಲೆನ್ಸ್ ಮೆಂಡೋನ್ಸ ರವರನ್ನು ಆಸ್ಪತ್ರೆಗೆ ದಾಖಲು ಮಾಡುವ ಸಮಯದಲ್ಲಿ ಅವರ ವಿಳಾಸವನ್ನು ಯಾವುದು ಎಂದು ನೀಡಿರುತ್ತೀರಿ ಎಂದರೆ ದಾವಾ ಆಸ್ತಿಯ ಮನೆಯ ವಿಳಾಸವನ್ನು ಹಾಗೂ ಕೇರ್ ಆಫ್ ಎಂದು ನನ್ನ ಮನೆಯ ವಿಳಾಸವನ್ನು ನೀಡಿರುತ್ತೇನೆ. ಆಸ್ಪತ್ರೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಬಹುದೇ ಎಂದರೆ ಸಲ್ಲಿಸಬಹುದು. ಅಲೆನ್ಸ್ ಮೆಂಡೋನ್ಸ ರವರು ನಿಮ್ಮ ಮನೆಯಲ್ಲಿ ಇದ್ದ ಕಾಲದಲ್ಲಿ ಹೊರಗಡೆ ಎಲ್ಲಾ ಓಡಾಡಿಕೊಂಡು ಇರುತ್ತಿದ್ದರೆ ಎಂದರೆ ಹೌದು. ಅವರು ಮನೆಯಲ್ಲಿಯೇ ಕುಳಿತಿರಲಿಲ್ಲ. ಅಲೆನ್ಸ್ ಮೆಂಡೋನ್ಸ ರವರು ನಿಮ್ಮ ಮನೆಯಲ್ಲಿ ಇದ್ದ ಕಾಲದಲ್ಲಿ ಅವರಿಗೆ ಔಷಧಿಯನ್ನು ಯಾರು ತಂದು ಕೊಡುತ್ತಿದ್ದರು ಎಂದರೆ ಅವರು

ತರುತ್ತಿದ್ದರು ಹಾಗೂ ನಾನೂ ಸಹ ತಂದು ಕೊಡುತ್ತಿದ್ದೆನು. ಅಲೆನ್ಸ್ ಮೆಂಡೋನ್ಸ ರವರಿಗೆ ನೀವು ಔಷಧಿಯನ್ನು ತಂದು ಕೊಡುತ್ತಿದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಬಹುದೇ ಎಂದರೆ ಸಲ್ಲಿಸಬಹುದು.

ಅಲೆನ್ಸ್ ಮೆಂಡೋನ್ಸ ರವರ ಸಹಿ ಇರುವಂತಹ ಯಾವ ದಾಖಲೆಗಳು ನಿಮ್ಮ ಬಳಿ ಇರುತ್ತದೆ ಎಂದರೆ ಆ ಸಮಯದಲ್ಲಿ ಇತ್ತು, ಅವುಗಳ ಅವಶ್ಯಕತೆ ಇಲ್ಲವೆಂದು ನಾನು ನಾಶ ಮಾಡಿರುತ್ತೇನೆ. ಅಲೆನ್ಸ್ ಮೆಂಡೋನ್ಸ ರವರ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದರೆ ನೆನಪಿಲ್ಲ. ಅಲೆನ್ಸ್ ಮೆಂಡೋನ್ಸ್ ರವರು ಬ್ಯಾಂಕ್ ನ ಖಾತೆಗಳನ್ನು ಹೊಂದಿದ್ದರೆ ಎಂದರೆ ಹೊಂದಿದ್ದರು. ಯಾವ ಬ್ಯಾಂಕ್ ಗಳಲ್ಲಿ ಖಾತೆಗಳನ್ನು ಹೊಂದಿದ್ದರು ಎಂದರೆ ಉಡುಪಿಯ ಕೆನರಾ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿದ್ದರು. ಉಳಿದ ಬ್ಯಾಂಕ್ ಗಳ ಖಾತೆಗಳ ಬಗ್ಗೆ ನನಗೆ ಗೊತ್ತಿಲ್ಲ. ಅಲೆನ್ಸ್ ಮೆಂಡೋನ್ಸ ರವರು ತೀರಿಕೊಳ್ಳುವ ಕಾಲಕ್ಕೆ ಅವರ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದರೆ ಈಗ ನನಗೆ ನೆನಪಿಲ್ಲ, ಆದರೆ ಅವರ ಖಾತೆಯಲ್ಲಿ ಇದ್ದ ಹಣದಲ್ಲಿ 10 ಲಕ್ಷ ರೂ.ಗಳನ್ನು ಆದರ್ಶ ಆಸ್ಪತ್ರೆಗೆ ಕಟ್ಟಿರುತ್ತೇನೆ. ಅಲೆನ್ಸ್ ಮೆಂಡೋನ್ಸ್ ರವರ ಆಸ್ಪತ್ರೆಯ ಖರ್ಚು ವೆಚ್ಚಗಳನ್ನು ಅವರ ಖಾತೆಯಲ್ಲಿದ್ದ ಹಣದಿಂದಲೇ ಮಾಡಿರುವುದು ಎಂದರೆ ಹೌದು. ಅಲೆನ್ಸ್ ಮೆಂಡೋನ್ಸ ರವರ ಪಾಸ್ ಪುಸ್ತಕ ನಿಮ್ಮ ಬಳಿ ಇದೆಯೇ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದೇ ಎಂದರೆ ಅದು ನನ್ನ ಬಳಿ ಇರುವುದಿಲ್ಲ. ಅಲೆನ್ಸ್ ಮೆಂಡೋನ್ಸ ರವರು ಅವರ ಜೀವಿತ ಕಾಲದಲ್ಲಿ ಸಹಿ ಮಾಡಿರುವ ಯಾವುದೇ ದಾಖಲೆಗಳು ನಿಮ್ಮ ಬಳಿ ಇರುವುದಿಲ್ಲ, ಅವುಗಳನ್ನು ಹಾಜರುಪಡಿಸಲು ಸಾಧ್ಯವಿಲ್ಲ ಎಂದು ನೀವು ಹೇಳುವುದೇ ಎಂದರೆ ಹೌದು.

ಈ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದಪತ್ರವನ್ನು ತಯಾರಿಸಲು ನಿಮ್ಮ ಗೌರವಾನ್ವಿತ ವಕೀಲರಿಗೆ ನೀವೇ ಮಾಹಿತಿಗಳನ್ನು ನೀಡಿರುತ್ತೀರಾ ಅಥವಾ ಬೇರೆ ಯಾರಾದರೂ ನೀಡಿರುತ್ತಾರಾ ಎಂದರೆ ನಾನೇ ನೀಡಿರುತ್ತೇನೆ. ನಿಮ್ಮ ಗೌರವಾನ್ವಿತ ವಕೀಲರಿಗೆ ಪ್ರತಿವಾದಪತ್ರವನ್ನು ತಯಾರಿಸಲು ಮಾಹಿತಿಯನ್ನು ನೀಡುವ ಸಮಯದಲ್ಲಿ, ಪುರಸಭೆಗೆ ಇ-

ಖಾತೆಯನ್ನು ಮಾಡಲು ಅರ್ಜಿಯನ್ನು ಸಲ್ಲಿಸುವಾಗ ಸಲ್ಲಿಸಿದ ದಾಖಲೆಗಳನ್ನು ಮಾತ್ರವೇ ನಿಮ್ಮ ಗೌರವಾನ್ವಿತ ವಕೀಲರಿಗೆ ನೀಡಿರುತ್ತೀರಾ ಅಥವಾ ಬೇರೆ ದಾಖಲೆಗಳನ್ನು ನೀಡಿರುತ್ತೀರಾ ಎಂದರೆ ನಮ್ಮ ಗೌರವಾನ್ವಿತ ವಕೀಲರು ಕೇಳಿದ ದಾಖಲೆಗಳನ್ನು ನಾನು ನೀಡಿರುತ್ತೇನೆ. ನಿಮ್ಮ ಗೌರವಾನ್ವಿತ ವಕೀಲರಿಗೆ ನಿಮ್ಮ ಬಳಿ ಯಾವ ಯಾವ ದಾಖಲೆಗಳು ಇತ್ತು ಎಂದು ಮೊದಲೇ ಅವರಿಗೆ ತಿಳಿದಿತ್ತೇ ಎಂದರೆ ನಾನು ಅವರಿಗೆ ನನ್ನ ಬಳಿ ಯಾವ ಯಾವ ದಾಖಲೆಗಳು ಇವೆ ಎಂದು ಅವರಿಗೆ ಹೇಳಿರಲಿಲ್ಲ. ನಿಮ್ಮ ಗೌರವಾನ್ವಿತ ವಕೀಲರು ಯಾವ ಯಾವ ದಾಖಲೆಗಳನ್ನು ಕೇಳಿದ್ದರು ಎಂದರೆ ಕೆಲವು ದಾಖಲೆಗಳನ್ನು ಕೇಳಿದ್ದರು, ಅವುಗಳು ಯಾವ ದಾಖಲೆಗಳು ಎನ್ನುವುದು ಈಗ ನನಗೆ ನೆನಪಿಲ್ಲ. ನಿಮ್ಮ ಗೌರವಾನ್ವಿತ ವಕೀಲರು ಕೇಳಿದ್ದಾರೆ ಎನ್ನುವ ಹಾಗೂ ನೀವು ಕೊಟ್ಟಿರುತ್ತೇನೆಂದು ಹೇಳುವ ದಾಖಲೆಗಳನ್ನು ಪ್ರತಿವಾದ ಪತ್ರವನ್ನು ಸಲ್ಲಿಸುವ ಕಾಲದಲ್ಲಿ ಸಲ್ಲಿಸಿರುತ್ತೀರಾ ಎಂದರೆ ಹೌದು. ಪ್ರತಿವಾದ ಪತ್ರದೊಂದಿಗೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಹೌದು.

ಅಲೆನ್ಸ್ ಮೆಂಡೋನ್ಸ ರವರು ಏನು ವಿದ್ಯಾಭ್ಯಾಸವನ್ನು ಮಾಡಿದ್ದರು ಎಂದರೆ ಬಿ.ಕಾಂ. ಪದವಿಯನ್ನು ಪಡೆದಿದ್ದರು. ಅಲೆನ್ಸ್ ಮೆಂಡೋನ್ಸ ರವರು ಏನು ಉದ್ಯೋಗದಲ್ಲಿ ಇದ್ದರು ಎಂದರೆ ಮೊದಲು ಅಕೌಂಟೆಂಟ್ ಆಗಿ ಕೆಲಸವನ್ನು ಮಾಡುತ್ತಿದ್ದರು. ಅಲೆನ್ಸ್ ಮೆಂಡೋನ್ಸ್ ರವರಿಗೆ ವಾದಿಯರೊಂದಿಗೆ ಒಳ್ಳೆಯ ಬಾಂದವ್ಯ ಇತ್ತೇ ಅಥವಾ ಇರಲಿಲ್ಲವೇ ಎಂದರೆ ಇರಲಿಲ್ಲ. ಅಲೆನ್ಸ್ ಮೆಂಡೋನ್ಸ ರವರಿಗೆ ವಾದಿಯರೊಂದಿಗೆ ದ್ವೇಷ ಅಥವಾ ವೈಮನಸ್ಸು ಇತ್ತೇ ಎಂದರೆ ವಾದಿಯರೇ ದ್ವೇಷ ಮಾಡಿಕೊಂಡಿದ್ದರು. ಪ್ರತಿವಾದಿಯವರೊಂದಿಗೂ ವೈಮನಸ್ಸು ಇತ್ತೇ ಎಂದರೆ ಇತ್ತು. ನಿಮಗೆ ಮತ್ತು ಅಲೆನ್ಸ್ ಮೆಂಡೋನ್ಸ ರವರಿಗೆ ಎಷ್ಟು ವರ್ಷಗಳಿಂದ ವೈಮನಸ್ಸು ಇತ್ತು ಎಂದರೆ ನಮ್ಮ ನಡುವೆ ವೈಮನಸ್ಸು ಇರಲಿಲ್ಲ. ಅಲೆನ್ಸ್ ಮೆಂಡೋನ್ಸ ರವರಿಗೂ ವಾದಿಯರಿಗೂ ಎಷ್ಟು ಸಮಯದಿಂದ ವೈಮನಸ್ಸು ಇತ್ತು ಎಂದರೆ 1 ನೇ ವಾದಿಯವರು ಮದುವೆಯಾದ ಒಂದು ವರ್ಷದ ನಂತರದಿಂದಲೂ ವೈಮನಸ್ಸು ಇತ್ತು. ವಾದಿಯರು ಬರುತ್ತಲೇ ಇರಲಿಲ್ಲವೇ ಎಂದರೆ ಬರುತ್ತಿರಲಿಲ್ಲ. ಅಲೆನ್ಸ್ ಮೆಂಡೋನ್ಸ ರವರಿಗೂ ವಾದಿಯರಿಗೂ ವೈಮನಸ್ಸು ಇರಲು ಏನು ಕಾರಣ ಎಂದರೆ ಅದು ನನಗೆ ಗೊತ್ತಿಲ್ಲ. ಅಲೆನ್ಸ್ ಮೆಂಡೋನ್ಸ ರವರಿಗೂ

ವಾದಿಯರಿಗೂ ವೈಮನಸ್ಸು ಇತ್ತು, ವಾದಿಯರು ದಾವಾ ಆಸ್ತಿಗೆ ಬರುತ್ತಿರಲಿಲ್ಲ ಎನ್ನುವ ವಿಷಯವನ್ನು ನಿಮ್ಮ ಗೌರವಾನ್ವಿತ ವಕೀಲರಿಗೆ ಪ್ರತಿವಾದ ಪತ್ರಕ್ಕೆ ಮಾಹಿತಿಯನ್ನು ನೀಡುವ ಸಮಯದಲ್ಲಿ ತಿಳಿಸಿರುತ್ತೀರಾ ಎಂದರೆ ಇಲ್ಲ. ಅಲೆನ್ಸ್ ಮೆಂಡೋನ್ಸ ರವರಿಗೂ ವಾದಿಯರಿಗೂ ಒಂದು ವೇಳೆ ವೈಮನಸ್ಸು ಇದ್ದಿದ್ದ ಪಕ್ಷದಲ್ಲಿ ನಿಮ್ಮ ಗೌರವಾನ್ವಿತ ವಕೀಲರಿಗೆ ತಿಳಿಸದೇ ಇರಲು ಏನಾದರೂ ಕಾರಣ ಇತ್ತೇ ಎಂದರೆ ನಮ್ಮ ಗೌರವಾನ್ವಿತ ವಕೀಲರು ಕೇಳಲಿಲ್ಲ ಆ ಕಾರಣದಿಂದ ನಾನು ಹೇಳಿರುವುದಿಲ್ಲ. ಅಲೆನ್ಸ್ ಮೆಂಡೋನ್ಸ ಮತ್ತು ವಾದಿಯವರಿಗೂ ಒಳ್ಳೆಯ ಬಾಂದವ್ಯ ಇತ್ತು, ಅವರ ನಡುವೆ ಯಾವುದೇ ವೈಮನಸ್ಸು ಇರಲಿಲ್ಲ ಆದರೂ ಸಹ ಅವರ ನಡುವೆ ವೈಮನಸ್ಸು ಇತ್ತು ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.